ಏಕಲವ್ಯ, ಅರ್ಜುನ, ಪದ್ಮಶ್ರೀ, ಖೇಲ್‌ರತ್ನ, ದ್ರೋಣಾಚಾರ್ಯ ಗೌರವಕ್ಕೆ ಪಾತ್ರರಾಗಿರುವ ಕ್ರೀಡಾ ಸಾಧಕರನ್ನು ಹೊಂದಿರುವ ಕರ್ನಾಟಕಕ್ಕೆ ಈ ಸಲದ ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್ ಆತಿಥ್ಯ ವಹಿಸುವ ಅವಕಾಶ ಸಿಕ್ಕಿರುವುದು ಹೆಮ್ಮೆ. ಭವಿಷ್ಯದ ಚಾಂಪಿಯನ್ನರನ್ನು ರೂಪಿಸುವ ಖೇಲೋ ಇಂಡಿಯಾ ಗೇಮ್ಸ್ ಸಂಭ್ರಮ ಬೆಂಗಳೂರಿನಲ್ಲಿ ಕಳೆಗಟ್ಟಿದೆ.



## ಭವಿಷ್ಯದ ಚಾಂಪಿಯನ್ನರನ್ನು ರೂಪಿಸುವ ಕ್ರೀಡಾ ಹಬ್ಬ

# ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್



## ಎಲ್ಲಿ ನಡೆಯಲಿದೆ?

ಏಪ್ರಿಲ್ 24ರಂದು ಜೈನ್ ಗ್ಲೋಬಲ್ ಯೂನಿವರ್ಸಿಟಿ ಕ್ಯಾಂಪಸ್‌ನಲ್ಲಿ ನಡೆಯಲಿರುವ ಉದ್ಘಾಟನಾ ಸಮಾರಂಭ ಮಾನ್ಯ ಉಪರಾಷ್ಟ್ರಪತಿ ಕೆ. ವೆಂಕಯ್ಯನಾಯ್ಡು ಅವರ ಘನ ಉಪಸ್ಥಿತಿಯಲ್ಲಿ ನಡೆಯಲಿದೆ. ಭಾರತ ಸರ್ಕಾರ, ಕರ್ನಾಟಕ ಸರ್ಕಾರ, ಭಾರತೀಯ ಕ್ರೀಡಾ ಪ್ರಾಧಿಕಾರ, ಅಖಿಲ ಭಾರತ ವಿಶ್ವವಿದ್ಯಾನಿಲಯಗಳ ಒಕ್ಕೂಟ ಹಾಗೂ ಜೈನ್ ವಿಶ್ವವಿದ್ಯಾನಿಲಯಗಳ ಸಹಭಾಗಿತ್ವದಲ್ಲಿ ಈ ಕ್ರೀಡಾಕೂಟ ನಡೆಯುತ್ತಿದೆ. ಅಂತಾರಾಷ್ಟ್ರೀಯ ಗುಣಮಟ್ಟದ ಶ್ರೀ ಕಂಠೀರವ ಕ್ರೀಡಾಂಗಣ ನೂತನ ಸಿಂಥೆಟಿಕ್ ಟ್ರ್ಯಾಕ್‌ನೊಂದಿಗೆ ಕ್ರೀಡಾಪಟುಗಳ ಸಾಮರ್ಥ್ಯ ಪ್ರದರ್ಶನಕ್ಕೆ ಸಜ್ಜಾಗಿದೆ. ಶ್ರೀ ಕಂಠೀರವ ಒಳಾಂಗಣ ಕ್ರೀಡಾಂಗಣ ನೂತನ ಸಿದ್ಧತೆಗಳೊಂದಿಗೆ ಸಜ್ಜಾಗಿ ನಿಂತಿದೆ, ಕನಕಪುರ ರಸ್ತೆಯಲ್ಲಿರುವ ಜೈನ್ ಯೂನಿವರ್ಸಿಟಿ ಗ್ಲೋಬಲ್ ಕ್ಯಾಂಪಸ್ ಹಾಗೂ ಜೈನ್ ಸ್ಪೋರ್ಟ್ಸ್ ಸ್ಕೂಲ್ ಹಾಗೂ ಭಾರತೀಯ ಕ್ರೀಡಾ ಪ್ರಾಧಿಕಾರದ ನೇತಾಜಿ ಸುಭಾಶ್ಚಂದ್ರ ಬೋಸ್ ಶೂಟಿಂಗ್ ರೇಂಜ್ ಕರ್ನಾಟಕದ ಐತಿಹಾಸಿಕ ಕ್ರೀಡಾಕೂಟಕ್ಕೆ ಸಾಕ್ಷಿಯಾಗಲಿದೆ.

ಜಯ (ಜಿಂಕೆ), ವಿಜಯ (ಹುಲಿ) ಹಾಗೂ ನಮ್ಮ ವೀರ (ಆನೆ) ಹೆಸರಿನ ಮಾಸ್ಕಾಟನ್ನು ಸಮಾರಂಭದಲ್ಲಿ ಈಗಾಗಲೇ ಬಿಡುಗಡೆ ಮಾಡಲಾಗಿದೆ. ಕ್ರೀಡಾಗೀತೆಯೂ ಬಿಡುಗಡೆಗೊಂಡಿದೆ.

### ದಾಖಲೆಯ ಕ್ರೀಡಾಪಟುಗಳು

ಕಳೆದ ಬಾರಿಯ ಕ್ರೀಡಾಕೂಟದಲ್ಲಿ 3500 ಸ್ಪರ್ಧಿಗಳು ಪಾಲ್ಗೊಂಡಿದ್ದು, ಈ ಬಾರಿ 4500ಕ್ಕೂ ಹೆಚ್ಚು ಕ್ರೀಡಾಪಟುಗಳು ಈ ಕ್ರೀಡಾ ಹಬ್ಬದಲ್ಲಿ ಪಾಲ್ಗೊಳ್ಳಲಿದ್ದಾರೆ. 1200 ಸಹಾಯಕ ಸಿಬ್ಬಂದಿ, 1,000 ತಾಂತ್ರಿಕ ಸಿಬ್ಬಂದಿ, 1300 ಸ್ವಯಂಸೇವಕರು, ಭಾರತದ ಕ್ರೀಡಾ ಇಲಾಖೆಯ ಅಧಿಕಾರಿಗಳು, ಕರ್ನಾಟಕ ರಾಜ್ಯ ಕ್ರೀಡಾ ಇಲಾಖೆ, ಭಾರತೀಯ ಕ್ರೀಡಾ ಪ್ರಾಧಿಕಾರ, ಅಖಿಲ ಭಾರತ ವಿಶ್ವವಿದ್ಯಾನಿಲಯಗಳ ಒಕ್ಕೂಟದ ಪ್ರಮುಖರು ಮತ್ತು ಜೈನ್ ಕಾಲೇಜಿನ ಪ್ರಮುಖರು ಕ್ರೀಡಾಕೂಟದ ಯಶಸ್ಸಿಗಾಗಿ ಶ್ರಮಿಸಲಿದ್ದಾರೆ.

### ಎಷ್ಟು ಕ್ರೀಡೆಗಳು?

20 ವಿವಿಧ ಕ್ರೀಡೆಗಳು ನಡೆಯಲಿದ್ದು, ಮೊದಲ ಬಾರಿಗೆ ದೇಶೀಯ ಕ್ರೀಡೆಯಾದ ಮಲ್ಲಕಂಬ ಮತ್ತು ಯೋಗಾಸನ ಕ್ರೀಡೆಗಳನ್ನು ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್‌ನಲ್ಲಿ ಅಳವಡಿಸಲಾಗಿದೆ.

ಕುಸ್ತಿ, ವೇಟ್‌ಲಿಫ್ಟಿಂಗ್, ಜೂಡೋ, ಕಬಡ್ಡಿ, ವಾಲಿಬಾಲ್, ಈಜು, ಮಲ್ಲಕಂಬ, ಯೋಗಾಸನ, ಆರ್ಚರಿ, ಫೆನ್ಸಿಂಗ್, ಕರಾಟೆ, ಬಾಕ್ಸಿಂಗ್ ಮತ್ತು ಫುಟ್ಬಾಲ್ ಸೇರಿ ಒಟ್ಟು 13 ಕ್ರೀಡೆಗಳು ಕನಕಪುರ ರಸ್ತೆಯಲ್ಲಿರುವ ಜೈನ್ ಯೂನಿವರ್ಸಿಟಿ ಗ್ಲೋಬಲ್ ಕ್ಯಾಂಪಸ್‌ನಲ್ಲಿ ನಡೆಯಲಿವೆ.

ಫುಟ್ಬಾಲ್, ಟೇಬಲ್ ಟೆನ್ನಿಸ್, ಬ್ಯಾಡ್ಮಿಂಟನ್ ಮತ್ತು ಟೆನ್ನಿಸ್ ಕ್ರೀಡೆಗಳು ಕನಕಪುರ ರಸ್ತೆಯಲ್ಲಿರುವ ಜೈನ್ ಸ್ಪೋರ್ಟ್ಸ್ ಸ್ಕೂಲ್‌ನಲ್ಲಿ ನಡೆಯಲಿವೆ. ಅಥ್ಲೆಟಿಕ್ಸ್ ಹಾಗೂ ಬಾಸ್ಕೆಟ್‌ಬಾಲ್ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ. ಫೀಲ್ಡ್ ಮಾರ್ಷಲ್ ಕಾರಿಯಪ್ಪ ಹಾಕಿ ಅಂಗಣದಲ್ಲಿ ಹಾಕಿ ಪಂದ್ಯಗಳು ನಡೆಯಲಿವೆ. ಬೆಂಗಳೂರಿನ ಭಾರತೀಯ ಕ್ರೀಡಾ ಪ್ರಾಧಿಕಾರದಲ್ಲಿರುವ ನೇತಾಜಿ ಸುಭಾಶ್ಚಂದ್ರ ಬೋಸ್ ಶೂಟಿಂಗ್ ರೇಂಜ್‌ನಲ್ಲಿ ಶೂಟಿಂಗ್ ಸ್ಪರ್ಧೆಗಳು ನಡೆಯಲಿವೆ.

### ಮಂಗಳೂರಿನ ಪ್ರಭುತ್ವ

ಮೊದಲ ಆವೃತ್ತಿಯ ಕ್ರೀಡಾಕೂಟದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಅಥ್ಲೆಟಿಕ್ಸ್ ವಿಭಾಗದಲ್ಲಿ ಚಾಂಪಿಯನ್ ಪಟ್ಟ ಗೆದ್ದಿರುವುದು ಕನ್ನಡಿಗರ ಹೆಮ್ಮೆ. ಕಳೆದ ಬಾರಿಯ ಚಾಂಪಿಯನ್ ಪಂಜಾಬ್ ಯೂನಿವರ್ಸಿಟಿ, ರನ್ನರ್ ಅಪ್ ಸಾವಿತ್ರಿಬಾಯಿ ಫುಲೆ ಪುಣೆ ಯೂನಿವರ್ಸಿಟಿ, ಪಂಜಾಬಿ ಯೂನಿವರ್ಸಿಟಿ, ಮಹರ್ಷಿ ದಯಾನಂದ್ ಯೂನಿವರ್ಸಿಟಿ, ಮಂಗಳೂರು ವಿಶ್ವವಿದ್ಯಾನಿಲಯ, ಲವ್ಲಿ ಪ್ರೊಫೆಷನಲ್ ಯೂನಿವರ್ಸಿಟಿ, ಗುರುನಾನಕ್ ದೇವ್ ಯೂನಿವರ್ಸಿಟಿ ಸೇರಿದಂತೆ ಪ್ರಮುಖ ಯೂನಿವರ್ಸಿಟಿಗಳು ಪಾಲ್ಗೊಳ್ಳಲಿದ್ದು, ಪದಕ ಗೆಲ್ಲಲು ಸೆಣಸಲಿವೆ.

ಕಳೆದ ಬಾರಿಯ ಕ್ರೀಡಾಕೂಟದಲ್ಲಿ ಪಂಜಾಬ್ ವಿಶ್ವವಿದ್ಯಾಲಯ (46 ಪದಕಗಳು) ಚಾಂಪಿಯನ್ ಪಟ್ಟ ಗೆದ್ದುಕೊಂಡಿತ್ತು. ಪುಣೆಯ ಸಾವಿತ್ರಿ ಬಾಯಿಪುಲೆ (37) ಮತ್ತು ಪಂಜಾಬಿ ವಿಶ್ವವಿದ್ಯಾನಿಲಯ (33) ಅನುಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಸ್ಥಾನ ಗಳಿಸಿದ್ದವು. ಕರ್ನಾಟಕದ ಮಂಗಳೂರು ವಿಶ್ವವಿದ್ಯಾನಿಲಯ (25) 5ನೇ ಸ್ಥಾನ ಗಳಿಸಿದರೆ, ಒಟ್ಟು 16 ಪದಕಗಳನ್ನು ಗಳಿಸಿದ ಈ ಬಾರಿಯ ಆತಿಥೇಯ ಜೈನ್ ವಿಶ್ವವಿದ್ಯಾನಿಲಯ 7ನೇ ಸ್ಥಾನ ಗಳಿಸಿದ್ದವು.

### ಮಿಂಚಿದ ಕರ್ನಾಟಕದ ತಾರೆ

ಖೇಲೋ ಇಂಡಿಯಾ ಯೂಥ್ ಗೇಮ್ಸ್ ಈಜಿನಲ್ಲಿ ಅತಿ ಹೆಚ್ಚು ಪದಕಗಳನ್ನು ಗೆದ್ದು ಉತ್ತಮ ಕ್ರೀಡಾಪಟು ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಶ್ರೀಹರಿ ನಟರಾಜ್ ನಂತರ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿರುವುದು ನಾವೆಲ್ಲರೂ ಹೆಮ್ಮೆ ಪಡುವಂಥ ವಿಚಾರ. ಈ ಬಾರಿಯೂ ಅವರು ಯೂನಿವರ್ಸಿಟಿ ಗೇಮ್ಸ್‌ನಲ್ಲಿ ಪಾಲ್ಗೊಳ್ಳಲಿದ್ದು, ಪದಕಗಳ ಕೊಳ್ಳೆ ಹೊಡೆಯುವ ಸಾಧ್ಯತೆ ಇದೆ. ಸದ್ಯ ಫ್ರಾನ್ಸ್‌ನಲ್ಲಿ ಸ್ಪರ್ಧೆಯಲ್ಲಿರುವ ಶ್ರೀಹರಿಯನ್ನು ಸಂಪರ್ಕಿಸಲು ಸಾಧ್ಯವಾಗಲಿಲ್ಲ.

### ಕಿರಿಯರ ಸಾಮ್ರಾಜ್ಯ

ಕಳೆದ ಬಾರಿಯ ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್‌ನ ಟ್ರಿಪಲ್ ಜಂಪ್‌ನಲ್ಲಿ ಚಿನ್ನ ಗೆದ್ದಿದ್ದ ಕರ್ನಾಟಕದ ಐಶ್ವರ್ಯ ಎಷ್ಯನ್ ಮತ್ತು ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಆಯ್ಕೆಯಾಗಿರುವುದು ಹೆಮ್ಮೆಯ ಸಂಗತಿ. ವಿಶ್ವ ಜೂನಿಯರ್ ಅಥ್ಲೆಟಿಕ್ಸ್‌ನಲ್ಲಿ ಕಂಚಿನ ಪದಕ ಹಾಗೂ ಏಷ್ಯನ್ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದಿರುವ ಕರ್ನಾಟಕದ ಯುವ ಓಟಗಾರ್ತಿ ಪ್ರಿಯಾ ಮೋಹನ್ ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್‌ನಲ್ಲಿ ಸ್ಪರ್ಧಿಸಲಿದ್ದಾರೆ.

### ಪರಿಸರ ಮತ್ತು ತಂತ್ರಜ್ಞಾನ

ಯುವಜನರಲ್ಲಿ ಪರಿಸರದ ಕಾಳಜಿಯ ಬಗ್ಗೆಯೂ ಅರಿವು ಮೂಡಿಸುವ ಉದ್ದೇಶದಿಂದ ಮೊದಲ ಬಾರಿಗೆ ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್‌ಅನ್ನು "ಗ್ರೀನ್ ಗೇಮ್ಸ್–ಹಸಿರು ಕ್ರೀಡಾಕೂಟ'' ಎಂದು ಘೋಷಿಸಿದ್ದು, ಇದು ಪ್ಲಾಸ್ಟಿಕ್ ಮುಕ್ತ ಕ್ರೀಡಾಕೂಟವಾಗಿರುತ್ತದೆ.

ಕ್ರೀಡಾಪಟುಗಳು, ತರಬೇತುದಾರರು ಹಾಗೂ ತಾಂತ್ರಿಕ ಸಿಬ್ಬಂದಿಗೆ ನೆರವಾಗುವ ಉದ್ದೇಶದಿಂದ ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್‌ನಲ್ಲಿ ಮೊಬೈಲ್ ಆಪ್ ಬಳಸಲಾಗುತ್ತಿದ್ದು, ಇದು ದಿನದ ಸ್ಪರ್ಧೆ, ಅಥ್ಲೀಟ್‌ಗಳ ಮಾಹಿತಿ, ವಸತಿ, ಸಾರಿಗೆ ಹಾಗೂ ನಿಯಮ ಪಾಲನೆ ಸೇರಿದಂತೆ ಹಲವಾರು ಮಾಹಿತಿಗಳನ್ನು ಒಳಗೊಂಡಿರುತ್ತದೆ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತ ಹೆಚ್ಚು ಮಿಂಚಬೇಕಾದರೆ, ಶಾಂತಿಯ ಪ್ರತೀಕವೆನಿಸಬೇಕಾದರೆ ಅದು ಕ್ರೀಡೆಯಿಂದ ಮಾತ್ರ ಸಾಧ್ಯ. ಎರಡು ದೇಶಗಳ ನಡುವೆ ಎಷ್ಟೇ ವೈರತ್ವ ಇದ್ದರೂ ಕ್ರೀಡೆ ಆ ಎರಡು ದೇಶವನ್ನು ಒಂದಾಗಿಸಬಲ್ಲದು. ಜಾತಿ, ಮತ, ಧರ್ಮ ಎಲ್ಲ ಎಲ್ಲೆಯನ್ನು ಮೀರಿದ ಕ್ರೀಡೆಗೆ ಪ್ರಾಥಮಿಕ ಹಂತದಲ್ಲೇ ಹೆಚ್ಚಿನ ಪ್ರೋತ್ಸಾಹ ಸಿಗುವಂತಾಗಬೇಕು. ಹಾಗಿದ್ದಲ್ಲಿ ಮಾತ್ರ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಪದಕ ಗೆಲ್ಲಲು ಸಾಧ್ಯ.